ಕಾಳಗ' ನಡೆಯುತ್ತಿದ್ದರೆ ಮುಂದೆ ನಾಕಾರು ಮಂದಿಯ 'ರುದ್ರ ನರ್ತನ'. ಎರಡೂ ಕೈಗಳಲ್ಲಿ ಟವೆಲ್ ಎತ್ತಿ ಹಿಡಿದು ಕುಣಿಯುತ್ತಿದ್ದಾರೆಂದರೆ ಅದು ಸುರಾಮೃತ ವರ್ಷಿಣಿ, ಆನಂದ ಕರ್ಷಿಣಿ ಎಂದೇ ತಿಳಿಯಬೇಕು. ಈ ಆನಂದಗಳ ಮುಂದೆ ನಾನು ಗಂಡು ಹೆಣ್ಣನ್ನು ನೋಡಿದ್ದೇ ಕಡಿಮೆ. ಕುದುರೆ ಬಂಡಿ ಓಡಿಸುವ, ಬಸ್ ಡ್ರೈವರ್ ಆಗುವ, ಸಿನಿಮಾ ರೀಲು ಬಿಡುವ, ಸಿನಿಮಾ ನೋಡಲು ಮರೆಯದಿರಿ ಮರೆತು ನಿರಾಶರಾಗದಿರಿ ಎಂದು ಚಕ್ಕಡಿಯಲ್ಲಿ ಊರು ಸುತ್ತಿ ಮೈಕಲ್ಲಿ ಪ್ರಚಾರ ಮಾಡುವ... ನನ್ನ ಪುರಾತನ ಆಸೆಗಳಲ್ಲಿ ಈ ಪೀಪಿ ಊದುವುದೂ ಸ್ವಲ್ಪಕಾಲ ಪ್ರಬಲವಾಗಿತ್ತು. 'ಸನಾದಿ ಅಪ್ಪಣ್ಣ' ಚಿತ್ರದ 'ಕರೆದರೂ ಕೇಳದೆ' ಹಾಡಿನಲ್ಲಿ ಬಿಸ್ಮಿಲ್ಲಾ ಖಾನ್ ಶೆಹನಾಯ್ ನುಡಿಸಿದ ಮೇಲಂತೂ ಯಾರಾದರೂ ನಮ್ಮನ್ನು ಕಾಶಿಗೆ ಕಳಿಸಿದ್ದರೆ ನಾವು ವಿಶ್ವನಾಥನಿಗಿಂತ ಮೊದಲು ನೋಡುತ್ತಿದ್ದುದು ಬಿಸ್ಮಿಲ್ಲಾಖಾನರನ್ನೇ ಎಂದು ಕಾಣುತ್ತದೆ. ಬಿಸ್ಮಿಲ್ಲಾಖಾನರ ಶಿಷ್ಯರೊಬ್ಬರು 'ನಾವು ಕರ್ನಾಟಕಕ್ಕೆ ಕಛೇರಿ ಕೊಡಲು ಬಂದಾಗಲೆಲ್ಲ ಕರೆದರೂ ಕೇಳದೆ... ನುಡಿಸುತ್ತೇವೆ. ಹಾಗೆ ನುಡಿಸುವುದೇ ತಡ ಜನರ ಹರ್ಷೋದ್ಗಾರ ನೋಡಿ ಖುಷಿಯಾಗುತ್ತೆ' ಎಂದು ಹೇಳಿದ್ದಾರೆ. ಕನ್ನಡ ಚಿತ್ರಗೀತೆಯೊಂದು ವಾರಣಾಸಿಯ ಮನಸ್ಸಿನಲ್ಲೂ ಗದ್ದಲ ಹುಟ್ಟಿಸುವುದು ಹೀಗೆ! ಕಛೇರಿಯ ಮಡಿ ಕೆಡಿಸಿ ಮಜಾ ತೆಗೆದುಕೊಳ್ಳುವುದು ಎಂದರೆ ಹೀಗೆ.

ಇಷ್ಟರಲ್ಲಿ ನನಗೆ ಇನ್ನೊಂದು ಮಜವಾದ ಹವ್ಯಾಸ ಶುರುವಾಗಿತ್ತು. ನನಗೆ ಜಿ.ಕೆ. ವೆಂಕಟೇಶ್ ಸಂಗೀತ ನಿರ್ದೇಶನ ಅಂದರೆ ಹೆಚ್ಚು ಇಷ್ಟವಾಗುತ್ತಿತ್ತು. ಅಂಥ ದೊಡ್ಡ ಹಿನ್ನೆಲೆ ಏನೂ ಇರಲಿಲ್ಲ. ನಮ್ಮಿಬ್ಬರ ಇನಿಷಿಯಲ್ಲೂ ಜಿ.ಕೆ. ಅನ್ನೋದೂ ಒಂದು ಮುಖ್ಯ ಕಾರಣವಿರಬಹುದು. ಆದರೂ ಅವರ ಸಂಗೀತದಲ್ಲಿ ಏನೋ ವಿಶೇಷ. ರಾಜನ್ – ನಾಗೇಂದ್ರ ಸಂಗೀತ ಅಂದರೆ ಆಗ ಬಹಳ ಜನ ಖುಷಿ ಪಡುತ್ತಿದ್ದರು. ಆದರೆ ಅವರು ಒಂದೇಥರ ಟ್ಯೂನ್ ಮಾಡ್ತಾರೆ. ಅದದೇ ರಿದಂಗಳು ಅಂತ ನನ್ನ ಅಭಿಪ್ರಾಯ. ಹೀಗಾಗಿ ಅವಕಾಶ ಸಿಕ್ಕಾಗಲೆಲ್ಲ ಜಿ.ಕೆ. ವೆಂಕಟೇಶರನ್ನು ಪ್ರತಿಷ್ಠಾಪಿಸಲು ಪ್ರಯತ್ನಿಸುತ್ತಿದ್ದೆ. ಆಗ 'ಗಿರಿಕನ್ಯೆ' ಮತ್ತು 'ಸೊಸೆ ತಂದ ಸೌಭಾಗ್ಯ' ಸಿನಿಮಾಗಳು ಒಟ್ಟೊಟ್ಟಿಗೇ ರಿಲೀಸ್ ಆಗಿದ್ದವು. ಮಾಡಲು ಕೆಲಸವಿಲ್ಲದಾಗೆಲ್ಲ ನಾನು ಮನಸ್ಸಿನಲ್ಲೇ 'ಗಿರಿಕನ್ಯೆ' ಚಿತ್ರದ 'ಏನೆಂದು ನಾ ಹೇಳಲೀ' ಹಾಡನ್ನು 'ಕೃಷ್ಣಾರ್ಜುನ ಕಾಳಗ'ದ ಅಸ್ತ್ರದ ಹಾಗೆ ಒಂದು ಕಡೆಯಿಂದ ಪ್ರಯೋಗಿಸಿಕೊಳ್ಳುತ್ತಿದ್ದೆ. ಅದಕ್ಕೆ ಪ್ರತಿಯಾಗಿ ಈ ಕಡೆಯಿಂದ 'ಸಾಕು ಎನ್ನುವನೆ ಸಾಹುಕಾರನು' ಹಾಡು ಬಿಟ್ಟು ಮೊದಲ ಹಾಡನ್ನು ಬೀಳಿಸುತ್ತಿದ್ದೆ. ಆ ಕಡೆಯಿಂದ 'ಕೂಡಿ ಬಾಳೋಣ' ಹಾಡು ಬಂದರೆ ಈ ಕಡೆಯಿಂದ 'ದೇಶ ದೇಶದೊಳಗೇ ಚಂದ' ಹಾಡು ಬಿಟ್ಟು ಬರಖಾಸ್ತು ಮಾಡುತ್ತಿದ್ದೆ. ಅಲ್ಲಿಂದ 'ನಗು ನಗುತಾ ನೀ ಬರಲು' ಬಂದಲ್ಲಿ ಈ ಕಡೆಯಿಂದ 'ರವಿವರ್ಮನ ಕುಂಚದ ಕಲೆ ಬಲೆ...' ಹೀಗೆ ಸೂತ್ರದ ಗೊಂಬೆಯಾಟದಂತೆ ಹಾಡುಗಳ ಕಾಳಗ ನಡೆಸಿ ಜಿ.ಕೆ. ವೆಂಕಟೇಶ್ ಅವರನ್ನು ಗೆಲ್ಲಿಸಿ 'ವೆಂಕಟೇಶ ಮಹಾತ್ಮೆ'ಯನ್ನು ಸಮಾಪ್ತಗೊಳಿಸುತ್ತಿದ್ದೆ. ಈಗ ಎಲ್ಲರೂ ಜಿ.ಕೆ. ವೆಂಕಟೇಶ್ ಅತ್ಯಂತ ಸೃಜನಶೀಲ ಸಂಗೀತ ನಿರ್ದೇಶಕ ಎಂದು ಹೊಗಳುವಾಗ ನನಗೆ ಇದು ಅಂದೇ ತಿಳಿದಿದ್ದಾದರೂ ಹೇಗೆ? ಒಂದು ಅಂದಾಜು ಲೆವೆಲ್ಲಿನ ಪೈರೂ ಮೊಳಕೆಯಲ್ಲೇ ಕಾಣಿಸುತ್ತದೆ ಎಂದು ಹೇಳಬಹುದೇನೋ.

ಇನ್ನು 'ಅಂತ್ಯಾಕ್ಷರಿ' ನಮ್ಮೆಲ್ಲರ ಮನರಂಜನೆಯ ಅದ್ಭುತ ಆಟವಾಗಿತ್ತು. ಅಕ್ಷರಕ್ಷರ ಜೋಡಿಸಿಕೊಂಡು ಹಾಡುವುದು ಉತ್ಸವ, ಮದುವೆ, ಸಮಾರಂಭ, ಪ್ರಯಾಣ ಮುಂತಾದೆಡೆ ನಮಗೆ ಸಾಮಾನ್ಯವಾಗಿತ್ತು. ನಮ್ಮ ಬಂಧುವೊಬ್ಬರಿಗೆ ಚಿತ್ರಗೀತೆಗಳಲ್ಲಿ ಬರುವ ಹೆಸರನ್ನು